# ಪಾಠ 11

# ಯೇಸು ಸ್ವಾಮಿಯ ದೋಷಪರಿಹಾರ ಯಜ್ಞದ ಫಲಾನುಭವಿಗಳು

## ಮೂಲ : ಬ್ರೂಸ್ ಎನ್ ಕ್ಯಾಮರಾನ್, ಅನುವಾದ : ಪಾಸ್ಟರ್ ಚೆಲುವರಾಜು

**ಪೀಠಿಕೆ:** – ಕಳೆದವಾರ ನಾವು ಯೇಸುಸ್ವಾಮಿಯವರ "ತೀರಿತು" ಎಂಬ (**ಯೋಹಾನ 19:30**) ಮಾತಿನೊಂದಿಗೆ ನಮ್ಮ ಪಾಠವನ್ನು ಮುಕ್ತಾಯ ಮಾಡಿದ್ದೆವು. ಯೇಸುಸ್ವಾಮಿ ತೀರಿತು ಎಂದು ಹೇಳಿದ್ದು ಯಾವುದನ್ನು? ಮಾನವರಿಗಾಗಿ ಅವರು ಏನೆಲ್ಲಾ ಮಾಡಬೇಕಾಗಿತ್ತೋ ಆ ಕೆಲಸ ತೀರಿತೋ? ತಂದೆಯೊಂದಿಗೆ ನಮಗೆ ಮಾಡಬೇಕಾಗಿದ್ದ ಸಂಧಾನ ತೀರಿತೋ? ಹಾಗಾದರೆ ಯೇಸುಸ್ವಾಮಿ ಹೀಗೇನು ಮಾಡುತ್ತಿದ್ದಾರೆ ಎಂಬ ವಿಷಯದಲ್ಲಿ ಕ್ರಿಶ್ಚಿಯನ್ನರ ನಡುವೆ ಚರ್ಚೆ ನಡೆಯುತ್ತಲೇ ಇದೆ. ಯೇಸುಸ್ವಾಮಿ ಶಿಲುಬೆಯ ಮೇಲೆ ಯಜ್ಞದ ಕುರಿಯಾಗಿ ಸಮರ್ಪಣೆಯಾದುದ್ದರ ಫಲಾನುಭವ ನಮಗೆಲ್ಲಾ ಸಿಕ್ಕಿದೆಯೇ? ಅಥವಾ ಸಿಗಬೇಕಾದ ಫಲಾನುಭವಿಗಳು ಇನ್ನು ಇವೆಯೇ? ಯೇಸುಸ್ವಾಮಿ ಈಗ ನಮಗೆ ಮಹಾಯಾಜಕನಾಗಿ ಪರಲೋಕದಲ್ಲಿ ಸೇವೆ ಮಾಡುತ್ತಿದ್ದಾರೆ ಎಂಬ ಒಂದು ಆಲೋಚನೆಯನ್ನು ಕುರಿತು ನಾವು ಈಗಾಗಲೇ ಅಧ್ಯಾಯನ ಮಾಡಿದ್ದೇವೆ. ಆದರೆ ಈ ಆಲೋಚನೆಯಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳುಂಟು. ಇದರ ಜೊತೆಗೆ, ಯೇಸುಸ್ವಾಮಿ "ತೀರಿತು" ಎಂದು ಹೇಳಿದ ಮೇಲೆ, ಮುಂದೆ ಅವರ ಕೆಲಸವನ್ನು ಪವಿತ್ರಾತ್ಮ ದೇವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂಬ ಆಲೋಚನೆಯು ಉಂಟು. ಈಗ ನಮಗಾಗಿ, ಯೇಸುಸ್ವಾಮಿ ಏನು ಮಾಡುತ್ತಿದ್ದಾರೆ ಎಂಬುದನ್ನು ಸತ್ಯವೇದದ ಆಳವಾದ ಅಧ್ಯಾಯನದಿಂದ ಕಲಿತುಕೊಳ್ಳೋಣ!

## I. ಒಬ್ಬ ಉತ್ತೋಮೋತ್ತಮನಾದ ಮಹಾಯಾಜಕ

(ಅ) **ಇಬ್ರೀಯ 7:11-14ನ್ನು ಓದಿಕೊಳ್ಳಿ.** ಇಸ್ರಾಯೇಲ್ಯರಲ್ಲಿ ಯಾವನಾದರೂ ಒಬ್ಬ ಯೌವನಸ್ಥ, ತಾನು ಯಾಜಕನಾಗಬೇಕೆಂದು ಬಯಸಿದರೆ, ಹಾಗೆ ಆಗಲು ಸಾಧ್ಯವಿತ್ತೇ? [**ಇಲ್ಲ ಧ.ಕಾ 10:8-9 ಮತ್ತು ಅ.ಕಾ 3:10ನ್ನು ಓದಿನೋಡಿರಿ.** ಲೇವಿ ಕುಲದವರು ಮಾತ್ರ ಯಾಜಕೋದ್ಯೋಗವನ್ನು ಆಲಯದಲ್ಲಿ ಮಾಡುತ್ತಿದ್ದರು. ಆರೋನ ಮತ್ತು ಆತನ ಗಂಡುಮಕ್ಕಳು (ಲೇವಿಯರಾಗಿದ್ದರಿಂದ ಯಾಜಕರಾಗಿದ್ದರು.)

(ಆ) **ಇಬ್ರೀಯ 7:14ನ್ನು ಓದಿಕೊಳ್ಳಿ.** ಈ ವಾಕ್ಯ ಯೇಸುಸ್ವಾಮಿ ಯಹೂದಿ ಕುಲಕ್ಕೆ ಸೇರಿದವನೆಂದು ಸೂಚಿಸುತ್ತದೆ. ಎಲ್ಲರೂ ಯಾಜಕರಾಗಲು ಸಾಧ್ಯವಿಲ್ಲ, ಯಾಜಕರಾಗಬೇಕಾದರೆ ತಕ್ಕ ಕುಲದಲ್ಲಿ ಜನಿಸಿರಬೇಕಾಗಿತು. ಹೀಗಿರುವಾಗ ಯೇಸುಸ್ವಾಮಿ ನಮ್ಮ ಮಹಾಯಾಜಕ ಎಂದು ನಾವು ಹೇಳುವುದು ಹೇಗೆ?

ಹಳೆಯ ಒಡಂಬಡಿಕೆಯ ಗುಡಾರ ಸೇವೆ ಒಂದು ಪ್ರವಾದನೆಯಾಗಿದ್ದು, ಅದು ಯೇಸುಸ್ವಾಮಿಯವರ ಮುಖಾಂತರ ನೆರವೇರಿತು ಎಂದು ನಾವು ಅಧ್ಯಾಯನ ಮಾಡುತ್ತಲೇ ಬಂದಿದ್ದೇವೆ. ನಮ್ಮ ತರ್ಕದಲ್ಲಿ ಏನೋ ಸಮಸ್ಯೆಯಿದೆ ಅನ್ನಿಸುತ್ತದೆಯೇ?

1. ಯೇಸುಸ್ವಾಮಿಯವರ ಜನನವೇ ಒಂದು ಅದ್ಭುತ, ಹೀಗಿರಬೇಕಾದರೆ ದೇವರು ಆತನನ್ನು ಆರೋನನ ಸಂತತಿಯಲ್ಲಿ ಜನಿಸುವಂತೆ ಮಾಡಲಿಲ್ಲವೇಕೆ?

(ಇ) **ಇಬ್ರೀಯ 7:1-3ನ್ನು ಓದಿಕೊಳ್ಳಿ**. ಮೆಲ್ಕಿಜೆದೇಕನ ಎರಡು ಅಧಿಕಾರ ಸ್ಥಾನಗಳು ಯಾವುವು? [ಆತ ಯಾಜಕನಾಗಿದ್ದರು ಮತ್ತು ರಾಜನು ಸಹ ಆಗಿದ್ದರು]

(ಈ) **ಇಬ್ರೀಯ 7:4-9ನ್ನು ಓದಿಕೊಳ್ಳಿ**. ಇಬ್ರೀಯ ಪತ್ರಿಕೆಯ ಬರಹಗಾರ ಮೆಲ್ಕಿಜೆದೇಕ, ಅಬ್ರಹಾಮ ಮತ್ತು ಲೇವಿಯರ ಕುರಿತು ಚರ್ಚೆಯನ್ನು ಇಲ್ಲಿ ಆರಂಭಿಸಿರುವುದೇಕೆ? [ಮೆಲ್ಕಿಜೆದೇಕನೋಪಾಯಲ್ಲಿ ಯೇಸುಸ್ವಾಮಿಯು ಸಹ ಯಾಜಕನೂ ಮತ್ತು ರಾಜನೂ ಆಗಿರುವುದು ಹಿಂದಿನಿಂದ ನಡೆದುಕೊಂಡು ಬಂದ ಒಂದು ವಾಡಿಕೆ ಎಂಬ ಚರ್ಚೆಯನ್ನು ಇಬ್ರೀಯ ಪತ್ರಿಕೆ ನಮ್ಮ ಮುಂದಿಟ್ಟಿದೆ. ಮೆಲ್ಕಿಜೆದೇಕನಿಗೆ, ಅಬ್ರಹಾಮ ಮತ್ತು ಲೇವಿಯರು ದಶಾಂಶವನ್ನು [ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ] ಸಲ್ಲಿಸಿದ್ದರಿಂದ, ಆತ ಅವರಿಗಿಂತ ದೊಡ್ಡವನು ಎಂದು ಇಬ್ರೀಯ ಪತ್ರಿಕೆಯಲ್ಲಿ ಹೇಳಲಾಗಿದೆ.]

(ಉ) ಯೇಸುಸ್ವಾಮಿ ಆರೋನನ ರೀತಿಯ ಮಹಾಯಾಜಕನಲ್ಲದೆ, ಮೆಲ್ಕಿಜೆದೇಕನ ರೀತಿಯ ಮಹಾಯಾಜಕನಾಗಿದ್ದ ಪಕ್ಷದಲ್ಲಿ, ಮೆಲ್ಕಿಜೆದೇಕನನ್ನು ಕುರಿತು ಸತ್ಯವೇದದಲ್ಲಿ ಹೆಚ್ಚಿನ ಮಾಹಿತಿಗಳು ಯಾಕಿಲ್ಲ? ಗುಡಾರ ವ್ಯವಸ್ಥೆ ಮೆಲ್ಕಿಜೆದೇಕನ ಮಾದರಿಯಲ್ಲಿರುವುದೇಕೆ? **[ಮತ್ತೆ ಇಬ್ರೀಯ 7:3ನ್ನು ಓದಿಕೊಳ್ಳಿ.]** ಆರೋನ ನಮ್ಮ ರೀತಿಯ ಮನುಷ್ಯನಾಗಿದ್ದ. ಆದರೆ ಮೆಲ್ಕಿಜೆದೇಕ ವಿಶೇಷ ವ್ಯಕ್ತಿ, ವಿಚಿತ್ರವಾದ ಅರಸ. ಆತನಿಗೆ ಜನ್ಮದ ಆರಂಭವೂ ಆಯುಷ್ಯದ ಅಂತ್ಯವೂ ಇಲ್ಲ ಅವನು ದೇವರ ಮಗನಿಗೆ ಸಮಾನವಾಗಿ ಮಾಡಲ್ಪಟ್ಟಿದ್ದಾನೆ. ಈ ಕಾರಣಗಳಿಂದಲೇ ಯೇಸುಸ್ವಾಮಿ ಆರೋನನ ಸಂತತಿಯಲ್ಲಿ ಬಂ ಯಾಜಕನಾಗಿರದೆ, ಅದಕ್ಕಿಂತಲೂ ಶ್ರೇಷ್ಟವಾದ ಮತ್ತೊಂದು ದಾರಿಯಲ್ಲಿ ಬಂದ ಮಹಾಯಾಜಕನಾಗಿದ್ದಾನೆ.]

(ಊ) ಯೇಸುಸ್ವಾಮಿ ಮೆಲ್ಕಿಜೆದೇಕನ ರೀತಿಯ ಮಹಾಯಾಜಕನೆಂದು ಪ್ರಕಟಿಸಿದವರ್‍ಯಾರು? **[ಇಬ್ರೀಯ 5:4-6ನ್ನು ಓದಿಕೊಳ್ಳಿ]**. ಇಂಥಹ ಒಂದು ಅಧಿಕಾರವು ನೇರವಾಗಿ ದೇವರಿಂದಲೇ ಬಂದದ್ದು.]

1. ಇಬ್ರೀಯ ಪತ್ರಿಕೆಯ ಬರಹಗಾರನಿಗೆ ಇಂತಹ ಹೇಳಿಕೆ ಎಲ್ಲಿಂದ ಬಂತು. ಆತನು ಇದನ್ನು ಎಲ್ಲಿಂದಲೊ ಉಲ್ಲೇಖ ಮಾಡಿದಂತಿದೆ. ಆತನು ಇಲ್ಲಿ ಉಲ್ಲೇಖಿಸಿರುವುದೇನು? **[ಕೀರ್ತನೆ 110:2-4ನ್ನು ಓದಿಕೊಳ್ಳಿ.**

ಯೇಸುಸ್ವಾಮಿಯವರನ್ನು ಕುರಿತು ಹಳೆಯ ಒಡಂಬಡಿಕೆಯ ಒಂದು ಪ್ರವಾದನೆಯಿದು.]

## II. ಬೇರೆಯಾದ ಧರ್ಮಶಾಸ್ತ್ರ

(ಅ) **ಇಬ್ರೀಯರು 7:11–12ನ್ನು ಓದಿಕೊಳ್ಳಿ.** ನಾನು ಈ ಮೊದಲೇ, ಯೇಸುಸ್ವಾಮಿ, ಆರೋನನ ಮೂಲದಿಂದ ಬರಲಿಲ್ಲವೇಕೆ? ಎಂದು ಕೇಳಿದನಷ್ಟೇ. ಆ ಪ್ರಶ್ನೆಗೆ, ಈ ವಾಕ್ಯಗಳು ಮತ್ತೊಂದು ಸಕಾರಣವನ್ನು ಕೊಡುವಂತಿದೆ. ಯಾಜಕತ್ವವು ಬೇರೆಯಾದರೆ, ಧರ್ಮಶಾಸ್ತ್ರವು ಕೂಡ ಬೇರೆಯಾಗುವುದು ಧರ್ಮಶಾಸ್ತ್ರ ಬೇರೆಯಾದದ್ದು ಹೇಗೆ? **[ಇಬ್ರೀಯರು 7:17–19ನ್ನು ಓದಿಕೊಳ್ಳಿ.** ] ಮೊದಲಿದ್ದ ನಿಯಮವು "ನಿರ್ಬಲ ಮತ್ತು ನಿಷ್ಪ್ರಯೋಜಕ" ನಾವು ಪರಿಪೂರ್ಣರಾಗಲು ಅವಕಾಶಮಾಡಿಕೊಂಡಲಿಲ್ಲ. "ಅದಕ್ಕೆ ಬದಲಾಗಿ ಉತ್ತಮವಾಗಿರುವ ಒಂದು ನಿರೀಕ್ಷಾಧಾರವು ಪ್ರಾಬಲ್ಯಕ್ಕೆ ಬಂತು. ಈ ನಿರೀಕ್ಷಾಧಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸುವಂಥದು."

(ಆ) **ಇಬ್ರೀಯರು 7:23–26ನ್ನು ಓದಿಕೊಳ್ಳಿ.** ಯೇಸುಸ್ವಾಮಿ ಹಳೆಯ ನಿಯಮವನ್ನು ಸುಧಾರಿಸಿರುವುದು ಹೇಗೆ?

(ಇ) **ಇಬ್ರೀಯರು 8:1–2ನ್ನು ಓದಿಕೊಳ್ಳಿ.** ನಾವು ಮೊದಲು ಕೇಳಿದ ಯೇಸುಸ್ವಾಮಿ ಈಗ ನಮಗಾಗಿ ಏನು ಮಾಡುತ್ತಿದ್ದಾರೆ? ಎಂಬ ಪ್ರಶ್ನೆಗೆ ಉತ್ತರ ಕೊಡುತ್ತಿದೆ. ಅವರು ಏನು ಮಾಡುತ್ತಿದ್ದಾರೆ? [ಅವರು ಪರಲೋಕದ ಗುಡಾರದಲ್ಲಿ ನಮಗಾಗಿ ಮಹಾಯೋಜಕ "ಉದ್ಯೋಗ" ಮಾಡುತ್ತಿದ್ದಾರೆ. ಯೇಸುಸ್ವಾಮಿ ನಮಗೋಸ್ಕರ, "ವಿಜ್ಞಾಪನೆಮಾಡುವುದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ." **(ಇಬ್ರೀಯರು 7:25)].**

(ಈ) **ಇಬ್ರೀಯರು 2:17–18 ಮತ್ತು ಇಬ್ರೀಯರು 4:14–18ನ್ನು ಓದಿಕೊಳ್ಳಿ.** ಪರಲೋಕದಲ್ಲಿ ಮಹಾಯಾಜಕನಾಗಿರುವ ಯೇಸುಸ್ವಾಮಿಯವರಿಂದ ನಮಗಿರುವ ಇತರೇ ಅನುಕೂಲಗಳು ಯಾವುವು? [ನಮ್ಮ ಆಮಿಷಗಳನ್ನು ಮತ್ತು ಬಲಹೀನತೆಗಳನ್ನು ಅವರು ಅರ್ಥಮಾಡಿಕೊಳ್ಳಬಲ್ಲರು.]

1. ಆರೋನನು ನಮ್ಮ ಹಾಗೆಯೇ ಪಾಪಿಯಾಗಿದ್ದರಿಂದ ನಮ್ಮನ್ನು ಅರ್ಥಮಾಡಿಕೊಳ್ಳುವ ವಿಷಯದಲ್ಲಿ ಆತ ಉತ್ತಮ ಆಯ್ಕೆಯಲ್ಲವೇ? [ಈ ವಾರ ಒಂದು ದಿನ ರಾತ್ರಿ ಸತ್ಯವೇದ ಅಧ್ಯಾಯನ ನಡೆಯುವ ಸ್ಥಳಕ್ಕೆ ಹೋಗಿದ್ದೆ. ಅಲ್ಲಿ ಬಿಳಾಮನ ಕಥೇಯ ಸತ್ಯಾನ್ವೇಷಣೆ ನಡೆದಿತ್ತು. **[ಅ.ಕಾ 22–44].** ಯಾವುದೇ ದೃಷ್ಟಿಕೋನದಿಂದ ನೋಡಿದರೂ ಇದೊಂದು ಹಾಸ್ಯಸ್ಪದ ಕಥೆ. ಅಹಂ ಮತ್ತು ಅತ್ಯಾಶೆಗೆ ಬಲಿಯಾಗಿ ಮಾಡಬೇಕೆಂದಿದ್ದ ಕೆಲಸದಲ್ಲಿ ವಿಫಲಗೊಂಡ ಪ್ರವಾದಿಯೊಬ್ಬನ ಕಥೆಯಿದು. ಅಲ್ಲಿದ್ದ ನಾವೆಲ್ಲರೂ ಈ ಪ್ರವಾದಿಯ ಹಾಗೆಯೇ ಒಂದಲ್ಲ ಒಂದು ವಿಷಯದಲ್ಲಿ ವಿಫಲರಾಗುತ್ತಿದ್ದೇವೆ. ಆದರೂ ನಿದ್ರಾವಸ್ಥೆಯಲ್ಲಿ ಆ

ಬಿಳಾಮನ ಕಥೆ ಕೇಳಿ ತಲೆಯಾಡಿಸುತ್ತಿರುತ್ತೇವೆ. ನಾವು ಪಾಪಿಗಳಾಗಿರಬಹುದು. ಆದರೆ ಪಾಪಿಗಳ ವಿಷಯದಲ್ಲಿ ಯಾವಾಗಳು ಕರುಣೆ ತೋರಬೇಕಾಗಿಲ್ಲ.]

## III. ಪವಿತ್ರಾತ್ಮ

(ಅ) **ಯೋಹಾನ 16:7–8ನ್ನು ಓದಿಕೊಳ್ಳಿ.** ಯೇಸುಸ್ವಾಮಿ ಅವರ ಶಿಷ್ಯರ ಹತ್ತಿರ ಮಾತನಾಡುತ್ತಿದ್ದಾರೆ. ಅವರು. ''ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ'' ಎಂದು ಶಿಷ್ಯರನ್ನು ಕುರಿತು ಹೇಳಿದರು. ಆ ಸಹಾಯಕನಾರು? ನನ್ನನ್ನು ಜನರು ಆಗಾಗ್ಗೆ ''ಸಹಾಯಕ'' ಎಂದು ಕರೆಯುವುದುಂಟು. ಅಂದರೆ ಇಲ್ಲಿ ಯೇಸುಸ್ವಾಮಿ ಒಬ್ಬ ವಕೀಲನನ್ನು ಕುರಿತು ಮಾತನಾಡುತ್ತಿದ್ದಾರೆಯೇ? [**ಯೋಹಾನ 14:16–17** ಯೇಸುಸ್ವಾಮಿಯವರು ಈ ''ಸಹಾಯಕನನ್ನು'' ''ಸತ್ಯದ ಆತ್ಮನು'' ಎಂದು ಕರೆದಿದ್ದಾರೆ. ಈ ಸತ್ಯದ ಆತ್ಮನು ತ್ರೈಯೇಕದಲ್ಲಿರುವ ಪವಿತ್ರಾತ್ಮನು].

(ಆ) **ಯೋಹಾನ 16:8–11ನ್ನು ಓದಿಕೊಳ್ಳಿ.** ಪವಿತ್ರಾತ್ಮನು ನಮ್ಮೊಂದಿಗಿರುವುದರಿಂದ ನಮಗಾಗುವ ಅನುಕೂಲಗಳೇನು? [ಪವಿತ್ರಾತ್ಮ ದೇವರು ನಮ್ಮ ಪಾಪ ಹಾಗೂ ಪಾಪಪ್ರಜ್ಞೆಯ ವಿಷಯದಲ್ಲಿ ಅರುಹನ್ನು ಹುಟ್ಟಿಸಿ, ದೇವರ ಮುಂದೆ ಅವುಗಳನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಯೇಸುಸ್ವಾಮಿಯ ಮುಖಾಂತರ ನಮಗೆ ಸೋಲಿಸಿದ್ದನ್ನು ಜ್ಞಾಪಕಪಡಿಸುತ್ತಾರೆ. ಈ ರೀತಿಯಾಗಿ ಇಡೀ ಲೋಕ ನ್ಯಾಯತೀರ್ಪಿನ ಕಡೆ ಮುನ್ಸಾಗಿದೆ.]

(ಇ) **ಯೋಹಾನ 16:12–15ನ್ನು ಓದಿಕೊಳ್ಳಿ.** ಪುನರುತ್ಥಾನಗೊಂಡ ನಮ್ಮ ಕರ್ತನು ಮತ್ತು ಈಗ ನಮ್ಮೊಂದಿಗಿರುವ ಪವಿತ್ರಾತ್ಮನ ನಡುವಿರುವ ನಂಟೇನು? [ಪವಿತ್ರಾತ್ಮ ದೇವರು ಯೇಸುಸ್ವಾಮಿಯವರ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದಾಗಿ ಅವರೇ ಹೇಳಿದ್ದಾರೆ. ಸಂಗೀತ ನಿರ್ದೇಶನದ ಕೋಲು ತ್ರೈಯೇಕತ್ವದ ಮತ್ತೊಂದಂಶಕ್ಕೆ ರವಾನಿಸಲಾಗಿದೆ.]

1. ಪವಿತ್ರಾತ್ಮ ದೇವರ ಇನ್ನಿತರ ಕೆಲಸಗಳಾವುವು? [ಅವರು ನಮ್ಮನ್ನು ಸತ್ಯದೆಡೆಗೆ ನಡೆಸುವರು, ಯೇಸುಸ್ವಾಮಿಯವರ ಮಹಿಮೆಯನ್ನು ನಮಗೆ ತೋರಿಸಿಕೊಡುವ ಮೂಲಕ ಅವರನ್ನು ಮಹಿಮೆಪಡಿಸುವರು.]

2. ಶಿಷ್ಯರುಗಳು ಪವಿತ್ರಾತ್ಮನ ವಿಷಯದಲ್ಲಿ ಮಾತನಾಡುತ್ತಾ ಹೇಳಿದ ಸಂಗತಿಗಳನ್ನು ಕೇಳಿ, ''ಇದೇನು ಈತನು ಹೇಳುವ ಮಾತು?'' ಎಂದು ಮಾತಾಡಿಕೊಂಡರು. ಸತ್ಯದ ವಿಷಯದಲ್ಲಿ ನಮಗೆ ಭಾರ ಎನಿಸುವುದೇನು? [ಈ ಮಾತುಗಳನ್ನು ಯೇಸುಸ್ವಾಮಿ ಶಿಲುಬೆಯ ಮರಣಕ್ಕೆ ಮುನ್ನ ತಿಳಿಸಿದರು ಎಂಬುದನ್ನು ಜ್ಞಾಪಿಸಿಕೊಳ್ಳಿ. ಹೊಸ ವ್ಯವಸ್ಥೆಯ ಮಾದರಿಯನ್ನು ಶಿಷ್ಯರಿಂದ ಮೊದಲೇ ಕಾಣಲಿಕ್ಕೆ ಸಾಧ್ಯವಾಗದೆ ಹೋಯಿತು. ಯೇಸುಸ್ವಾಮಿ ಹೊಸ ವ್ಯವಸ್ಥೆಯ

ನಾಯಕನೂ ಮತ್ತು ಇಸ್ರಾಯೇಲ್ಯರ ರಾಜನೂ ಆಗುತ್ತಾನೆ ಎಂದು ಅವರು ಆಲೋಚಿಸಿಕೊಂಡಿದ್ದರು.]

(ಈ) **ರೋಮ 8:1-4ನ್ನು ಓದಿಕೊಳ್ಳಿ.** "ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ ನಿಯಮ" ಎಂದರೇನು? ಇದು ಪವಿತ್ರಾತ್ಮ ದೇವರಿಗೆ ಸಂಬಂಧಿಸಿದ ವಿಷಯವೇ? [ಹೌದು ಧರ್ಮಶಾಸ್ತ್ರದ ಬೇಡಿಕೆಗಳನ್ನು ಯೇಸುಸ್ವಾಮಿ ನೆರವೇರಿಸಿದರು. ಅವರು ಪರಿಪೂರ್ಣವಾದ ಜೀವನವನ್ನು ಜೀವಿಸಿದ್ದರಿಂದ, "ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು." ಆದರೆ ಇಲ್ಲಿ ಒಂದು ಶರತ್ತು ಉಂಟು. ಅದೇನೆಂದರೆ ನಾವು ಪವಿತ್ರಾತ್ಮಾನುಸಾರವಾಗಿ ನಡೆಯುವದು.]

1. ಪರಲೋಕದಲ್ಲಿ ಯೇಸುಸ್ವಾಮಿ ನಡೆಯಿಸುತ್ತಿರುವ ಮಹಾಯಾಜಕ ಉದ್ಯೋಗ ಹಾಗೂ ಧರ್ಮಶಾಸ್ತ್ರದ ಹೊಸ ವ್ಯವಸ್ಥೆಯಲ್ಲಿ ಪವಿತ್ರಾತ್ಮ ದೇವರು ಭೂಮಿಯ ಮೇಲೆ ನಡೆಯಿಸುತ್ತಿರುವ ಕೆಲಸಗಳ ನಡುವಿರುವ ನಂಟನ್ನು ಈಗ ನೀವು ಕಾಣಬಲ್ಲಿರಾ?

2. ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ನಾವು ಈಗ ಜೀವನ ನಡೆಸಬೇಕಾದ್ದು ಮುಖ್ಯ ಎನಿಸುವುದು ಹೇಗೆ? [**ರೋಮ 8:5-8ನ್ನು ಓದಿನೋಡಿ.** ನಮ್ಮಲ್ಲಿರುವ ಶರೀರಭಾವವನ್ನು ನಾವು ಅನುಸರಿಸುವುದಾದರೆ, ನಾವು ದೇವರನ್ನು ಮೆಚ್ಚಿಸಲಾಗದೆಂದು ಸತ್ಯವೇದ ಹೇಳುತ್ತದೆ. ರೋಮ 8:9ನ್ನು ಓದಿಕೊಳ್ಳಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ.]

(ಉ) ಪವಿತ್ರಾತ್ಮನು ನಮ್ಮಲ್ಲಿ ಜೀವಿಸುವದು ನಮಗೆ ಗೊತ್ತಾಗುವದು ಹೇಗೆ? [**ಅ.ಕೃ. 1:4-5ನ್ನು ಓದಿಕೊಳ್ಳಿ**. ನಮಗೆ ಪವಿತ್ರಾತ್ಮನಿಂದ ಸ್ನಾನವಾಗಬೇಕಾಗಿದೆ. ನೀರಿನ ದೀಕ್ಷಾಸ್ನಾನವನ್ನು ಮೀರಿದ ಅನುಭವವಿದು. ಯೇಸುಸ್ವಾಮಿ ಪರಲೋಕದಲ್ಲಿ ತಮ್ಮ ಕೆಲಸ ಮುಂದುವರಿಸಲು ಹೋದ ನಂತರ, ಶಿಷ್ಯರು ಯೇಸುಸ್ವಾಮಿಯ ಸೇವೆ ಮುಂದುವರಿಸಲು ಪವಿತ್ರಾತ್ಮನ ವರವನ್ನು ಪಡೆಯುವುದು ಕಷ್ಟ ಎನಿಸಿತು. ಆದರೆ ಯೇಸುಸ್ವಾಮಿ ಎಂದಿನಂತೆ ಶಿಷ್ಯರೊಂದಿಗೆ ಕೆಲಸ ಮುಂದುವರಿಸಿದ್ದಾರೆ.]

(ಊ) **ಅ.ಕೃ 4:31ನ್ನು ಓದಿಕೊಳ್ಳಿ.** ಪವಿತ್ರಾತ್ಮ ದೇವರು ನಿಮ್ಮನ್ನು ನಡುಗಿಸಿದ್ದಾರೆಯೇ? ನಿಮ್ಮ ಸಭೆ ಅವರಿಂದ ನಡುಗಿಸಲ್ಪಟ್ಟಿದೆಯೇ? ಹಾಗಾಗದಿದ್ದರೆ, ನೀವು ಹೊರಗಿನವರೇ ಆಗಿರಬೇಕು. ಯೇಸುಸ್ವಾಮಿ ಇಂದು ಪರಲೋಕದಲ್ಲಿಯೂ ಮತ್ತು ಭೂಲೋಕದಲ್ಲಿಯೂ ಯಾವ ಕೆಲಸ ಮಾಡುತ್ತಿದ್ದಾರೋ ಅದರಿಂದ ನೀವು ಹೊರಗಿದ್ದೀರಿಯೇ?

(ಋ) ಯೇಸುಸ್ವಾಮಿ ಪರಲೋಕದಲ್ಲಿ ನಮಗಾಗಿ ಏನು ಮಾಡುತ್ತಿದ್ದಾರೋ ಅದನ್ನು ಸುಮ್ಮನೆ ತಿಳಿದುಕೊಂಡರೆ ಸಾಲದು ನನ್ನ ಸ್ನೇಹಿತನೆ. ಯೇಸುಸ್ವಾಮಿ ನಮಗಾಗಿ

ಪರಲೋಕದಲ್ಲಿ ಏನು ಮಾಡುತ್ತಿದ್ದಾರೋ, ಅದರಲ್ಲಿ ನಾವೂ ಪವಿತ್ರಾತ್ಮನ ಮೂಲಕ ಭಾಗಿಗಳಾಗಬೇಕು. ಯೇಸುಸ್ವಾಮಿಯ ದೋಷಪರಿಹಾರದಿಂದಾದ ಫಲಾನುಭವ : ಪವಿತ್ರಾತ್ಮ ದೇವರು ನಮ್ಮೊಂದಿಗಿರುವಿಕೆ. ಈಗ ಭೂಮಿಯಲ್ಲಿ ಏನು ನಡೆಯುತ್ತಿದೆಯೋ ಅದು ಪವಿತ್ರಾತ್ಮ ದೇವರ ಶಕ್ತಿಯಿಂದ ನಡೆಯುತ್ತಿರುವ ಕೆಲಸ. ಪವಿತ್ರಾತ್ಮ ದೇವರು ನಿನ್ನಲ್ಲಿ ಕೆಲಸ ಮಾಡುತ್ತಿಲ್ಲ ಎಂಬ ಸಂದೇಹ ನಿನಗಿದ್ದರೆ, ಈಗಿಂದಿಗಲೇ ಅವರ ಶಕ್ತಿಗಾಗಿ ಬೇಡಿಕೊಳ್ಳಿರಿ ಮತ್ತು ಅವರು ನಿಮ್ಮೊಂದಿಗಿರಲು ಆಹ್ವಾನ ನೀಡಿರಿ.

## IV. ಮುಂದಿನ ವಾರ : ಕ್ರಿಸ್ತನಲ್ಲಿ ಒಂದುಗೂಡೋಣ.